ಅವನ ಮಾತುಗಳಿಂದ ಸಿಟ್ಟು ಬಂದ ಅಲ್ಲಿದ್ದ ಇನ್ನೊಬ್ಬ ಸಂಬಂಧಿ "ನಾಲಿಗೆ ಬಿಗಿ ಇರಲಿ ಇನ್‌ಸ್ಪೆಕ್ಟರ್... ನಾವೆಲ್ಲ ಮರ್ಯಾದಸ್ಥ ಕುಟುಂಬದಿಂದ ಬಂದವರು'' ಎಂದ.

ಅವನ ಮಾತುಗಳಿಂದ ವಿಚಲಿತನಾಗದ ನಾಗರಾಜಯ್ಯ, "ಮರ್ಯಾದಸ್ಥರ ಮನೆಯಲ್ಲಿಯೇ ಇವೆಲ್ಲಾ ಹೆಚ್ಚು. ಇವರ ಆಸ್ತಿ ಎಷ್ಟು ಇರಬಹುದು ಮಿ. ನಾಗಭೂಷಣ್?"

" ಅಂದಾಜು ಅರವತ್ತು ಎಪ್ಪತ್ತು ಕೋಟಿ ಇರಬೇಕು. ಎಲ್ಲಾ ಈ ಕೆಲಸದಾಕೆಗೆ ಬರೆದಿದ್ದಾರೆ."

"ಅಂದರೆ ಕೇಸ್ ಕ್ಲೋಸ್. ತನಗೆ ಬರಬೇಕಿದ್ದ ಆಸ್ತಿ ಬೇರೆಯವರಿಗೆ ಬರಬಾರದು ಎಂದು ಇವಳು ಕೊಲೆ ಮಾಡಿದ್ದಾಳೆ ಅಲ್ಲವೇ" ಎನ್ನುತ್ತಾ ಅಲ್ಲಿದ್ದವರ ಕಡೆ ತಿರುಗಿ ನೋಡಿದ. ಎಲ್ಲರ ಮುಖ ಗರಬಡಿದವರಂತಾಯಿತು. ಅಮಾಯಕಳಂತಿರುವ ಕೆಲಸದವಳು ಈ ರೀತಿ ಮಾಡಬಹುದೆ ಎಂದು.

"ಸರ್, ಸುಮ್ಮನೆ ಅಪವಾದ ಹೊರಿಸಬೇಡಿ. ನಿಮ್ಮ ಮಾತು ವ್ಯವಹಾರ ನಡೆ ನುಡಿ ಎಲ್ಲಾ ನೋಡಿದರೆ ನಿಮಗೆ ಈ ಕೇಸ್ ಬಗ್ಗೆ ಆಸಕ್ತಿ ಇದ್ದ ಹಾಗೇ ಇಲ್ಲ. ಆದಷ್ಟು ಬೇಗ ಯಾರನ್ನಾದರೂ ಸಿಕ್ಕಿಸಿ ಶಹಭಾಸ್ ಗಿಟ್ಟಿಸಿಕೊಂಡು ರಿಟೈರ್ ಆಗೋಣ ಎಂದುಕೊಂಡಿರುವಂತಿದೆ. ಮೇಲ್ನೋಟಕ್ಕೆ ನಿಮ್ಮ ಮಾತು ನಂಬುವಂತಿದ್ದರೂ ಆಧಾರ, ಸಾಕ್ಷಿ ಇಲ್ಲದೆ ಯಾರನ್ನೂ ಹಾಗೆ ಆರೋಪಿ ಸ್ಥಾನದಲ್ಲಿ ನಿಲ್ಲಿಸಲು ಆಗದು. ಮೊದಲು ಈ ಬಾಡಿಯನ್ನು ಸಾಗಿಸಿ ನಂತರ ಮತಾಡುವಿರಂತೆ" ಎಂದು ಸುನೀಲ್ ಸ್ವಲ್ಪ ಖಾರವಾಗಿಯೇ ನುಡಿದ.

ಅವನ ಮಾತಿನಿಂದ ಸ್ವಲ್ಪ ವಿಚಲಿತನಾದ ನಾಗರಾಜಯ್ಯ. ತೋರಿಸಿಕೊಳ್ಳದೇ "ನಮ್ಮ ಕೆಲಸ ನಮಗೆ ಗೊತ್ತಿದೆ. ಸ್ವಲ್ಪ ಸುಮ್ಮನಿರಪ್ಪ. ಹಾಂ ಇನ್ನೊಂದು ವಿಚಾರ. ಎಕ್ಸಿಟ್ ವೂಂಡ್‌ನಿಂದ ಗುಂಡು ಹೊರ ಬಂದಿದೆ. ಆದರೆ ಅದು ಇಲ್ಲಿ ಸಿಕ್ಕಿಲ್ಲ ಅಂದರೆ ಕೊಲೆಗಾರ ಬೆಡ್‌ರೂಂ ಒಳಗಡೆಯ ಬಾಗಿಲಿನಿಂದ ಬಂದಿದ್ದಾನೆ. ಗೊತ್ತಾಗದೇ ಬಾಗಿಲು ಮುಚ್ಚುವಾಗ ಈ ರೂಂ ಲಾಕ್ ಆಗಿದೆ. ಕೊಲೆ ಮಾಡಿ ಕಾರಿಡಾರ್‌ಗೆ ತೆರೆದುಕೊಳ್ಳುವ ಬಾಗಿಲಿನಿಂದ ಹೊರ ಹೋಗಿದ್ದಾನೆ ಅಂತಾಯಿತು. ಆದರೆ ಹೊರಗಡೆಯೂ ನಮಗೆ ಬುಲೆಟ್ ಸಿಕ್ಕಿಲ್ಲ. ಎಲ್ಲರೂ ನಿನ್ನೆ ಬಂದಿರುವುದರಿಂದ ಈ ಬಾಗಿಲ ಬಗ್ಗೆ ಉಳಿದವರಿಗೆ ತಿಳಿದಿರುವ ಸಾಧ್ಯತೆ ಕಡಿಮೆ. ವಿಶಾಲಾಕ್ಷಮ್ಮ ಹಾಗೂ ರಜನಿಗೆ ಮಾತ್ರ ಗೊತ್ತಿದೆ. ಇವರಿಬ್ಬರೂ ಸೇರಿ ಈ ಯಾಕೆ ಈ ಕೆಲಸ ಮಾಡಿರಬಾರದು?"

ನಾಗರಾಜಯ್ಯನ ತರ್ಕಕ್ಕೆ ಒಮ್ಮೆ ಎಲ್ಲರೂ ದಂಗಾದರು. ರಜನಿ ಏನೋ ಹೇಳ ಹೊರಟಳು. ಅವಳನ್ನು ತಡೆದ ನಾಗಭೂಷಣ ಸುಮ್ಮನಿರೆಂದು ಸನ್ನೆ ಮಾಡಿದರು.

ತನ್ನ ಮಾತು ಮುಂದುವರೆಸುತ್ತಾ ನಾಗರಾಜಯ್ಯ "ರೀ ವಿಶಾಲಾಕ್ಷಮ್ಮ ಬನ್ನಿ ಇಲ್ಲಿ" ಅವನ ಧ್ವನಿ ಈಗ ಮೊದಲಿನಂತಿರಲಿಲ್ಲ, ಗಡುಸಾಗಿತ್ತು. ಅದೇನೋ ಕಂಡು ಹಿಡಿದೆ ಎಂಬ ಹೆಮ್ಮೆ ಅವನ ಧ್ವನಿಯಲ್ಲಿ ಇತ್ತು.

"ನಿಜ ಹೇಳಿ, ವಿಶ್ವನಾಥ್ ಇವರಿಗೆಲ್ಲಾ ಯಾಕೆ ಫೋನ್ ಮಾಡಲು ಹೇಳಿದ್ರು, ನಿಮಗೇ ಯಾಕೆ ಹೇಳಿದ್ರು, ಅವರೇ ಯಾಕೆ ಮಾಡಲಿಲ್ಲ?''

"ನನಗೆ ಗೊತ್ತಿಲ್ಲ ಸಾರ್, ಎಲ್ಲಾ ನಂಬರ್ ಕೊಟ್ಟು ಫೋನ್ ಮಾಡು. ಎಲ್ಲರನ್ನೂ ನಿನ್ನೆಯ ದಿನಕ್ಕೆ ಬರಹೇಳು ಅಂದರು. ರಜನಿ ಮೇಡಂ ನಂಬರ್ ಬುಕ್‌ನಲ್ಲಿ ಇತ್ತು. ಇನ್ನೆಲ್ಲಾ ಅವರೇ ಕೊಟ್ಟರು, ಮಾಡಿದೆ.''

"ಸರಿಯಾಗಿ ನೆನಪಿಸಿಕೊಂಡು ಹೇಳು. ಎಷ್ಟು ಹೊತ್ತಿಗೆ ಎದ್ದೆ ನೀನು."

"ದಿನಾ ಐದೂವರೆಗೆ ಎದ್ದು ಮುಖ ತೊಳೆದು ಬರುವಷ್ಟರಲ್ಲಿ ಹಾಲಿನವ ಬರುತ್ತಿದ್ದ ಸರ್.